ಆಸ್ಪತ್ರೆ ಗೀಸ್ಪತ್ರೆಗೆ ಸೇರಿಸಿ ನೋಡಿಕೊಳ್ಳುತ್ತಾನಾ ಅಥವಾ ಕಾಟಾಚಾರಕ್ಕೆ ನೋಡಿಕೊಂಡ ಹಾಗೆ ಮಾಡುತ್ತಾನಾ? ಬೇರೆಯವರ ಹತ್ತಿರ ಇರಲಿ, ದಶಕಗಳಿಂದ ಜೊತೆಗಿದ್ದ ಸೀತೆಯ ಹತ್ತಿರ ಕೂಡಾ ಅಳಿಯ ತಮ್ಮೊಂದಿಗೆ ನಡೆದುಕೊಳ್ಳುವ ರೀತಿಯ ಕುರಿತು ಭಟ್ಟರು ತುಟಿ ಒಡೆದಿಲ್ಲ. ಹತ್ತಿರದವರ ಹುಳುಕುಗಳನ್ನು ಮುಚ್ಚಿಟ್ಟು ಅವರನ್ನು ಒಪ್ಪಿಟ್ಟುಕೊಳ್ಳುವುದು ಅನೇಕರ ಜಾಯಮಾನ ಆಗಿರಬಹುದಾ? ತಮ್ಮಂತೆ? ಸುಖವಾಗಿದ್ದೇವೆಂದು ತೋರ್ಪಡಿಸಿಕೊಳ್ಳುವುದೂ ಕೂಡಾ ಒಂದು ದೌರ್ಬಲ್ಯ ಇರಬಹುದಾ? ಸ್ವಾಭಿಮಾನವನ್ನು ಕಾಯ್ದುಕೊಳ್ಳುವ ಒಂದು ಪರಿ? ಯಾವ ಮುಲಾಜೂ ಇಲ್ಲದೆ ಮನೆಯ ಒಳಗುಟ್ಟನ್ನು ಹೇಳಿಕೊಳ್ಳುವ ಮುದುಕರ ಕುರಿತು ಹೀನಾಯ ಅನಿಸುತ್ತಿದ್ದಿದ್ದು ಯಾಕೆ? ಯಾರದಾದರೂ ಕನಿಕರಕ್ಕೆ ಪಾತ್ರರಾಗುವುದೆಂದರೆ ವ್ಯಕ್ತಿಗೌರವಕ್ಕೆ ಚ್ಯುತಿ ಬಂದಂತೆ ಅನ್ನುವ ನಂಬಿಕೆಯಿಂದಲಾ? ವಯಸ್ಸಾದವರಿಗೂ ಆತ್ಮಗೌರವ ಇರುತ್ತದೆ ಅನ್ನುವುದನ್ನು ಗಣನೆಗೆ ತೆಗೆದುಕೊಳ್ಳುವವರೇ ಕಮ್ಮಿ ಅನಿಸುತ್ತಿರುವುದು ಯಾಕೆ? ಕೈಲಿ ದುಡ್ಡಿದ್ದರೂ ಒಂದೇ, ಇಲ್ಲದಿದ್ದರೂ ಒಂದೇ ಎನ್ನುವ ಕಾಲ ಬಂದುಬಿಟ್ಟಿದೆಯಾ? ಶೀನಪ್ಪಯ್ಯ ಹೇಳಿದಂತೆ? ದುಡ್ಡಿದ್ದರೆ 'ಮುದುಕ ಬೇಗ ಸಾಯಬಾರದಾ?' ಅಂದುಕೊಳ್ಳುತ್ತಿರಬಹುದೆಂಬ ಗುಮಾನಿ. ಇಲ್ಲದಿದ್ದರೆ 'ಇನ್ನೂ ಎಷ್ಟು ವರ್ಷ ದಂಡಪಿಂಡದ ಹೊಟ್ಟೆ ಹೊರೆಯಬೇಕು?' ಎನ್ನುವ ತಾತ್ಸಾರಕ್ಕೆ ಪಕ್ಕಾಗಬಹುದೆಂಬ ಭೀತಿ. ಕೊನೆಗಾಲದಲ್ಲಿ ಕೈಕಾಲು ಬಿದ್ದು ಹಾಸಿಗೆ ಹಿಡಿದರಂತೂ ಅಧೋಗತಿ. 'ಸಾಕು ಇನ್ನು. ಹೀಗೆ ಬದುಕಿರೋದೂಂದ್ರೆ ಅವರಿಗೂ ಕಷ್ಟ, ನೋಡ್ಕಳ್ಳೋರಿಗೂ ಕಷ್ಟ...' ಎಂದು ಹಾಸಿಗೆ ಹಿಡಿದು ಮಲಗಿದವರ ಎದುರೇ ನಿರ್ದಾಕ್ಷಿಣ್ಯವಾಗಿ ಹೇಳುವ ಪ್ರಸಂಗಗಳನ್ನು ನೋಡಿದ್ದಾರೆ ಭಟ್ಟರು. ಹಾಸಿಗೆ ಹಿಡಿದ ಮಾತ್ರಕ್ಕೆ ಅವರ ಭಾವನೆಗಳೇ ಸತ್ತು ಹೋಗಿರುತ್ತವೆ ಎನ್ನುವ ಲೆಕ್ಕಾಚಾರವೇ? ಸಾವು, ಬದುಕು ಯಾರ ಕೈಲಿರುತ್ತದೆ? ಹಾರೈಸಿದ ಕೂಡಲೆ ಸಾವು ಬಂದುಬಿಡುತ್ತದೆಯಾ, ಕೈಯಾರೆ ಜೀವ ತೆಗೆದುಕೊಳ್ಳುವುದರ ಹೊರತು?

ಯಾಕೆ ಹೀಗೆಲ್ಲಾ ಅನಿಸುತ್ತಿದೆ ಎಂದು ಕೇಳಿಕೊಂಡರೆ ಪ್ರತಿ ಸಲ ಮಗಳ ಮನೆಗೆ ಹೋಗಿ ಬಂದಾಗಲೂ ತಮ್ಮ ಅಂತಃಸತ್ವ ಇಷ್ಟಿಷ್ಟೇ ಕುಗ್ಗಿ ಹೋಗುತ್ತಿದೆ ಎನ್ನುವ ಕಾರಣ ಕಂಡುಕೊಳ್ಳುತ್ತಾರೆ ಭಟ್ಟರು. ಅಳಿಯ ಅಂದರೆ ಯಾರು? ಎಲ್ಲೋ ಹುಟ್ಟಿ, ಎಲ್ಲೋ ಬೆಳೆದು, ಋಣಾನುಬಂಧದಿಂದ ಸಂಬಂಧಕ್ಕೆ ಜೋಡಣೆಗೊಂಡವನು. ಅಳಿಯನೋ, ಸೊಸೆಯೋ, ತಮ್ಮನ್ನು ಪ್ರೀತಿಸಲಿ, ವಿಶ್ವಾಸದಿಂದ ನೋಡಿಕೊಳ್ಳಲಿ ಎನ್ನುವ ಚಪಲವೇ ದುಬಾರಿಯಾದದ್ದಾ? ದುರಾಸೆ ಅನ್ನಿಸಿಕೊಳ್ಳುವಂತಾದ್ದಾ? ಎಲ್ಲಾ ಹೀಗಿರುವುದಿಲ್ಲ ಅಂದುಕೊಳ್ಳುತ್ತಾರೆ ಭಟ್ಟರು. ಆದರೆ, ಮನೆಯ ನಾಲ್ಕು ಗೋಡೆಗಳ ನಡುವಿನ ಒಳಗುಟ್ಟುಗಳು ಹೊರಗಿನವರಿಗೆ ಗೊತ್ತಾಗುವುದಾದರೂ ಹೇಗೆ? ಈಗ ಯಾರಿಗೆ ಗೊತ್ತಿದೆ ತಮ್ಮ ಅಂತರಂಗದ ಕುದಿ? ಮೇಲ್ನೋಟಕ್ಕೆ ಎಲ್ಲಾ ಸುಸೂತ್ರ. ಇದ್ದಾರು ಕೆಲವರು ಪುಣ್ಯವಂತರು, ವಯಸ್ಸಾಗಿದ್ದರೂ ಮನೆಮಂದಿಯ ಆದರಕ್ಕೆ ಭಾಜನರಾದಂತವರು...

"ನಾಳೆ ನಾನು ಹೊರಡಲೇನೋ?" ಸೀತೆಯ ಮಾತಿಗೆ ತಟ್ಟನೆ ವಾಸ್ತವ ಪ್ರಪಂಚದ ಅರಿವಾಯ್ತು ಭಟ್ಟರಿಗೆ.

"ಹೋಗ್ಲೇಬೇಕೂಂತಾದ್ರೆ ಹೋಗ್ಲೇಬೇಕಲ್ಲ?"

"..."

"ನಿನ್ನನ್ನ ಚೆನ್ನಾಗಿ ನೋಡ್ಕೋತಾರೇನೇ ಸೀತೆ? ಸಸಾರ ಮಾಡಲ್ಲ ತಾನೇ?"

ಶೀನಪ್ಪಯ್ಯನ ಸಾವು ತಮ್ಮನ್ನು ಹಿಡಿದು ಅಲುಗಾಡಿಸಿದ್ದರ ಪ್ರಭಾವವೇ ಇಂತಾ